ಅನ್ನವನ್ನು ಕೊಡುತ್ತಿದ್ದ ಅಮೂಲ್ಯ ನಾಲ್ಕು ತಿಂಗಳುಗಳು ಅವಾಗಿದ್ದವು. ಆ ಅವಧಿಯಲ್ಲಿ ಏನೂ ಕೆಲಸವಿಲ್ಲದೆ ನೊಣ ಹೊಡೆಯುತ್ತಾ ಮನೆಯಲ್ಲೇ ಕುಳಿತಿರಬೇಕಾಯಿತು. ಅಡುಗೆ ಸಹಾಯಕರು, ಬಡಿಸುವವರು, ಎಲೆ ತೆಗೆಯುವವರು ಸೇರಿ ನನ್ನೊಡನೆ 20 ಜನ ಕೆಲಸಕ್ಕೆ ಇದ್ದರು. ಆದಾಯವೇ ಇಲ್ಲದೆ ಅವರ ಕುಟುಂಬಗಳೆಲ್ಲ ಸಂಕಟಪಡುವುದನ್ನು ನನಗೆ ನೋಡಲಾಗುತ್ತಿಲ್ಲ. ಆದರೆ, ನಾನೂ ಅಸಹಾಯಕ ಸ್ಥಿತಿಯಲ್ಲಿದ್ದೇನೆ. ನಿರ್ಬಂಧಗಳೆಲ್ಲ ತೆರವಾಗಿ, ಕಡಿಮೆ ಜನರಿರುವ ಸಮಾರಂಭಗಳಿಗೆ ಅವಕಾಶ ನೀಡಲಾಗಿರುವ ಈ ದಿನಗಳಲ್ಲೂ ಮೊದಲಿನಂತೆ ಗುತ್ತಿಗೆಗಳು ಸಿಗುತ್ತಿಲ್ಲ' ಎಂದು ರಾಘವೇಂದ್ರ ವಿವರಿಸುತ್ತಾರೆ.

ಇದು ಅಡುಗೆ ಗುತ್ತಿಗೆದಾರರ ಸಂಕಟ ಮಾತ್ರವಲ್ಲ. ಬಾಜಾ ಭಜಂತ್ರಿ ಹಾಗೂ ನಾಗಸ್ವರ ವಾದನ ತಂಡಗಳದ್ದೂ ಅದೇ ಕಥೆ. ಬ್ಯಾಂಡ್ ಸೆಟ್ ಹೊತ್ತು ಬರುತ್ತಿದ್ದ ಗಾಡಿಗಳು ನಿಂತಲ್ಲೇ ನಿಂತಿವೆ. ಮೆರವಣಿಗೆಗೆ ಕಳೆ ಕಟ್ಟುತ್ತಿದ್ದ ಕುದುರೆ ಗಾಡಿಗಳು ಗ್ಯಾರೇಜು ಸೇರಿವೆ. ಕುದುರೆಗಳಿಗೆ ಲಾಯದಲ್ಲಿ ನಿಲ್ಲುವುದೇ ಕೆಲಸವಾಗಿದೆ. 'ಮದುವೆಗಳೇ ನಡೆಯುತ್ತಿಲ್ಲ ಎಂದಮೇಲೆ ನಮ್ಮ ಬ್ಯಾಂಡ್ ಯಾರಿಗೆ ಬೇಕು. ನಮ್ಮ ಮಹಾರಾಜಾ ಡ್ರೆಸ್ ಅನ್ನು ಕಳೆದ 5–6 ತಿಂಗಳಿನಲ್ಲಿ ಒಮ್ಮೆಯೂ ಪೆಟ್ಟಿಯೊಳಗಿಂದ ಹೊರತೆಗೆದಿಲ್ಲ' ಎಂದು ರಾಮದುರ್ಗದ ನರಸಪ್ಪ ಭಜಂತ್ರಿ ಹೇಳುತ್ತಾರೆ. ಬ್ಯಾಂಡ್ ತಂಡದ ಬಹುತೇಕ ಸದಸ್ಯರು ಈಗ ನರೇಗಾ ಕೆಲಸ ಅರಸಿಕೊಂಡು ಹೋಗಿದ್ದಾರೆ. ಪುರೋಹಿತರಿಗೆ ಮದುವೆಯೊಂದೇ ಉದ್ಯೋಗ ಅಲ್ಲ ಅನ್ನುವುದು ನಿಜವಾದರೂ ಆದಾಯದಲ್ಲಿ ತೀವ್ರ ಖೋತಾ ಆಗಿದೆ ಎನ್ನುವುದು ಅವರ ನೋವು.



## ಎಲ್ಲರಿಗೂ ಬಿದ್ದಿದೆ ಪೆಟ್ಟು

ಛತ್ರಗಳ ವ್ಯವಸ್ಥಾಪಕರಿಗಂತೂ ವರ್ಷದ ಬಹುದೊಡ್ಡ ನಷ್ಟವನ್ನು ತುಂಬಿಕೊಳ್ಳುವ ದಾರಿ ಯಾವುದು ಎನ್ನುವುದೇ ಗೊತ್ತಾಗುತ್ತಿಲ್ಲ. ಭವಿಷ್ಯದ ದಿನಗಳಲ್ಲಿ ಮೊದಲಿನಂತೆ ಮದುವೆಗಳು ನಡೆಯುವವೇ ಎಂಬ ಚಿಂತೆಯೂ ಅವರನ್ನು ಕಾಡುತ್ತಿದೆ. ಮದುವೆಗಳಿಗಾಗಿ ಹೊಸ ಹೊಸ ಆಭರಣಗಳನ್ನು ವಿನ್ಯಾಸ ಮಾಡುತ್ತಿದ್ದವರು, ಮೇಕ್‌ಅಪ್ ಮಾಡುತ್ತಿದ್ದವರು, ವಸ್ತ್ರ ವಿನ್ಯಾಸ ಮಾಡಿಕೊಡುತ್ತಿದ್ದವರು ಎಲ್ಲರಿಗೂ ಸರಳ ಮದುವೆಗಳು ಒಂದಿಲ್ಲೊಂದು ರೀತಿಯಲ್ಲಿ ಪೆಟ್ಟು



ಸರಳ ಮದುವೆಯ ಸರಳ ಮಂಟಪ